ಶ್ರೀ ಎಸ್. ರಂಗರಾಮಯ್ಯನವರು.—ಹಾಗಾದರೆ ನಮ್ಮ ಸಂಸ್ಥಾನದಲ್ಲಿ ಅಂಥಾ ಫ್ಯಾಕ್ಟರಿಗಳು ಎಷ್ಟಿವೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹತ್ತಾರು ಫ್ಯಾಕ್ಟರಿಗಳಿವೆ.

Arrangements to meet the Deficit of food grains in the State during 1951-52.

* *Q.*—**3. Sri M. V. KRISHNAPPA** (Kolar District–General).—Will the Government be pleased to state :—

(*a*) the expected deficit of food-grains in the State during the year 1951–52;

(*b*) the quantity of foodgrains that will be given by the Centre to meet the deficit this year ?

A.—**The Hon'ble Sri T. MARIAPPA** (Home Minister).—

(*a*) 1,42,000 tons.

(*b*) 75,000 tons.

ಶ್ರೀ ಎಂ. ವಿ. ಕೃಷ್ಣಪ್ಪನವರು.—(a) ಪ್ರಶ್ನೆಯಲ್ಲಿ " the expected deficit of food grains in the State during the year 1951–52 " ಎಂದು ಕೇಳಿರುವುದಕ್ಕೆ ಉತ್ತರವಾಗಿ 1,42,000 ಟಿಕ್ ಎಂದು ಹೇಳಿದ್ದೀರಿ ಕೊರತೆ ಬೀಳುವುದನ್ನು ಯಾವ ರೀತಿಯಾಗಿ ಲೆಕ್ಕ ಹಾಕುತ್ತೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಯಾವ ಆಧಾರದ ಮೇಲೆ ಹಂಚುತ್ತೇವೆಯೋ ಅದನ್ನು ಅಂದಾಜನ್ನುಮೇಲೆ ಕಂಡುಹಿಡಿದು ಲೆಕ್ಕಹಾಕುತ್ತೇವೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಸಂಸ್ಥಾನದಲ್ಲಿ ಕೊರತೆಯಾಗಬಹುದಾದ್ದನ್ನು ಲೆಕ್ಕಕ್ಕೆ ತೆಗೆದು ಕೊಂಡು ತಾನೆ ಕೊರತೆಬೀಳುವುದನ್ನು ನಿಗದಿ ಮಾಡುವುದು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನೆಲ್ಲಾ ಗಣನೆಗೆ ತೆಗೆದುಕೊಂಡೇ ಗೊತ್ತುಮಾಡುವುದು.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಕೊರತೆಯಿಂದ ಬೇಕಾದ ಗುರಿಮುಟ್ಟಲು ಸಾಧ್ಯವಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ. ಆ ಗುರಿಯನ್ನು ಮುಟ್ಟಬೇಕೆಂಬುದೇ ಸರ್ಕಾರದ ಉದ್ದೇಶ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಆ ಗುರಿ ಯಾವುದೆಂಬುದು ಗೊತ್ತಾದಮೇಲೆ ತಾನೆ ಕೊರತೆಯನ್ನು ನಿಗದಿಮಾಡುವುದು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗಲ್ಲ. ಮೊದಲು ಪ್ರಿಲಿಮಿನರಿಯಾಗಿಯೂ, ಆ ಮೇಲೆ ಎಷ್ಟು ಬರಬಹುದೆಂಬುದನ್ನೂ ನೋಡಿ ಎಲ್ಲಾ ಬಾಬುಗಳನ್ನೂ ಗಮನಿಸಿ ಕೊರತೆಯನ್ನು ನಿಗದಿಮಾಡುತ್ತೇವೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಸಂಸ್ಥಾನದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಯನ್ನು ಲೆಕ್ಕಕ್ಕೆ ತೆಗೆದು ಕೊಂಡಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಈಚೆಗೆ ಸೆನ್ಸಸ್ ಅಂಕಅಂಶಗಳಿಂದ ಗೊತ್ತಾಗಿದೆ. ಅದರಿಂದ ಸ್ವಲ್ಪ ನಮಗೆ ಷಾಕ್ ಆಗಿದೆ. ಈಗ ಶೇಕಡ 12½ ಯಷ್ಟು ಹೆಚ್ಚಾಗಬಹುದೆಂದು ಅಂದಾಜುಮಾಡಿದೆ.

ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—ಈಗ 1,42,000 ಟಿಕ್ ಕೊರತೆ ಬೀಳಬಹುದೆಂದು ಹೇಳುವಾಗ ರೈತರಿಗೆ ಎಷ್ಟು ಧಾನ್ಯ ಉಳಿಸಬೇಕೆಂದು ಗೊತ್ತು ಮಾಡಿದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನೆಲ್ಲಾ ಹಾರ್ವೆಸ್ಟ್ ಆರ್ಡರಿನಲ್ಲೇ ಹೇಳಿದೆ. ಮೊದಲಿಂದ ಇರುವಹಾಗೆ ರೈತರಿಗೆ 16 ಔನ್ಸ್‌ನಂತೆ ಬಿಟ್ಟಿದೆ.

ಶ್ರೀ ಬಿ. ಚನ್ನಬೈರೇಗೌಡರು.—150 ಸೇರಿನಂತೆ ಅವರಿಗೆ ಬಿಡಬೇಕೆಂದು ಆರ್ಡರಿದೆಯೆಂಬುದನ್ನು ಒಪ್ಪುತ್ತೀರಿ ತಾನೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆರ್ಡರಿನಲ್ಲಿರುವುದನ್ನು ಒಪ್ಪಿಕೊಳ್ಳಬೇಕಾಗಿಲ್ಲ. ಅದು ಇದ್ದೇ ಇದೆ.

ಶ್ರೀ ಬಿ. ಚನ್ನಬೈರೇಗೌಡರು.—ಹಾರ್ವೆಸ್ಟ್ ಆರ್ಡರಿನಲ್ಲಿರುವಂತೆ 150 ಸೇರನ್ನು ಬಿಡುವುದು ಅಸತ್ಯವೆಂದೂ, ಆ ರೀತಿಯಾಗಿ ನಡೆಯುತ್ತಿಲ್ಲವೆಂದೂ ಹೇಳಿದರೆ ಒಪ್ಪುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಸತ್ಯ ಎಂದು ಹೇಳುವುದು ಸರಿಯಿಲ್ಲ. It must be refuted.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—1,42,000 ಟಿಕ್ ಕೊರತೆಯಿದೆಯೆಂದು ಹೇಳಿದೆ. ಇದು ರೇಷಿಕ ಕಡಿಮೆ ಮಾಡಿರುವುದರ ಆಧಾರದ ಮೇಲೆ ಗೊತ್ತು ಮಾಡಿದೆಯೆ ಅಥವಾ ಕಡಮೆ ಮಾಡುವುದಕ್ಕೆ ಮುಂಚೆ ಲೆಕ್ಕ ಹಾಕಲಾಗಿತ್ತೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮೊದಲದ್ದ ಸ್ಕೇಲ್ ಆಧಾರದ ಮೇಲೆ ಅದನ್ನು ನಿಗದಿ ಮಾಡಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ರೇಷಿಕ ಕಡಿಮೆ ಮಾಡಿರುವ ಪ್ರಕಾರ ಎಷ್ಟಾಗುತ್ತದೆ ?

The Hon'ble Sri T. MARIAPPA.—I want notice. But this cut is for a temporary period. Therefore it need not be taken into consideration.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—1943-44 ರಿಂದ ಪ್ರತಿವರ್ಷ ಎಷ್ಟೆಷ್ಟು ಕೊರತೆ ಬಿದ್ದಿದೆ ಎಂಬುದನ್ನು ಹೇಳುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—1943—44 ರಲ್ಲಿ ಹೆಚ್ಚು ಆಹಾರ ಬೆಳೆಯುವ ಯೋಜನೆ ಪ್ರಾರಂಭವಾದಾಗ ಎಷ್ಟು ಕೊರತೆಯಿತ್ತು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—1943 ರ ವಿಚಾರ ಗೊತ್ತಿಲ್ಲ. 1944ರಿಂದ ನೋಟೀಸ್ ಕೊಟ್ಟರೆ ಹೇಳಬಹುದು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಕೊರತೆಯು ದಿನೇ ದಿನೇ ಹೆಚ್ಚುತ್ತಿದೆಯೋ ಅಥವಾ ಕಡಿಮೆಯಾಗುತ್ತಿದೆಯೋ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಕೆಲವು ಸಂದರ್ಭದಲ್ಲಿ ಸೀಜನರ್ ಕಂಡೀಷಿಕ ಮೇಲೆ ಹೋಗುತ್ತದೆ. 1946-47 ರಲ್ಲಿ ಜಾಸ್ತಿಯಾಗಿ ಹೋದ ವರ್ಷ ಕಡಮೆಯಾಗಿತ್ತು. ಹೋದ ವರ್ಷ ಒಂದು ಲಕ್ಷ 68 ಸಾವಿರ ಟಿಲ್ಲರೆ ಟಿಕ್ ಕೊರತೆಯಿತ್ತು. ಈ ವರ್ಷ ಸ್ವಲ್ಪ ಕಡಮೆಯಾಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—1945—46ರಲ್ಲಿ ಅಕ್ಯಿಜಿಷಿಕ ಆಗಿರುವುದು ಸರ್ಕಾರದ ಗಮನದಲ್ಲಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—1944-45 ರಲ್ಲಿ ಸ್ವಲ್ಪ ಜಾಸ್ತಿ ಮಾಡಿದರು, ಅಷ್ಟೆ. 1945-46 ರಲ್ಲಿ ಇಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—1946ರಲ್ಲಿ ಅಕ್ಸೆಪ್ಟೆಡ್ ನಮ್ಮ ಸಂಸ್ಥಾನದಲ್ಲಿ ಅತ್ಯಂತ ಹೆಚ್ಚು ಎಂಬುದು ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—75 ಸಾವಿರ ಟನ್ ಅಲ್ಲದೆ ಇನ್ನೂ ಕಡಮೆಯಾಗುವುದಕ್ಕೆ ಏನು ಏರ್ಪಾಡು ಮಾಡಿದೆ? How do the Government propose to meet the balance of the requirements?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದಕ್ಕೆ ಕೇಂದ್ರ ಸರ್ಕಾರವನ್ನು ಕೇಳಿದೆ. 75 ಸಾವಿರ ಟನ್ ಸಾಲುವುದಿಲ್ಲ, ಸಾಲದಿರುವುದನ್ನು ಕೊಡಬೇಕು ಎಂದು ಒತ್ತಾಯವಾಗಿ ಹೇಳಿದೆ.

Sri H. M. CHANNABASAPPA.—How do the Government propose to meet the deficit if it is not received from the Centre?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೋದ ವರ್ಷ ಸಹ ಸ್ವಲ್ಪ ಜಾಸ್ತಿ ಕೊಟ್ಟರು. ಆದ್ದರಿಂದ ಆ ಭರವಸೆ ಈಗಲೂ ಇದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಕೊರತೆಯನ್ನು ಲೆಕ್ಕ ಹಾಕಿದಾಗ 82 ಲಕ್ಷ ಪ್ರಜಾಸಂಖ್ಯೆಯಿದೆಯೆಂಬುದನ್ನು ನೋಡಿತಾನೆ ಮಾಡಿರುವುದು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—1952ನೆಯ ಇಸವಿಗೆ ಅದರಂತೆ ಆಗಬಹುದು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಏಳ ಲಕ್ಷ ಚಿಲ್ಲರೆ ಜನಸಂಖ್ಯೆ ಹೆಚ್ಚಾದರೆ 21 ಲಕ್ಷ ಟನ್ ಡಿಫಿಸಿಟ್ ಹೆಚ್ಚಾಗುತ್ತದೆಯೆಂಬುದು ಗೊತ್ತೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸ್ವಲ್ಪ ಹೆಚ್ಚಾಗುತ್ತದೆ.

Sri Kadidal MANJAPPA (Shimoga District—General).—Who fixes the target for the whole State?

The Hon'ble Sri T. MARIAPPA.—The Director of Food Supplies in consultation with the Deputy Commissioners.

Sri Kadidal MANJAPPA.—What is the basis for fixing this target?

The Hon'ble Sri T. MARIAPPA.—The basis is the estimate of production of foodgrains.

Sri Kadidal MANJAPPA.—Is it not the Shanbhogue's *pahani*?

The Hon'ble Sri T. MARIAPPA.—Of course, it is the foundation on which the whole thing is drawn up.

Sri Kadidal MANJAPPA.—Are the local Officers being compelled to procure the targets fixed?

The Hon'ble Sri T. MARIAPPA.—It is not a question of compulsion. It is the discharge of the duties.

Sri Kadidal MANJAPPA.—Can you not reduce the target fixed?

The Hon'ble Sri T. MARIAPPA.—We find fault with them if they fail to procure the surplus which is determined in accordance with the principles of the Harvest Order.

Sri Kadidal MANJAPPA.—Has it not come to the notice of the Government that in many parts of the State harassment is being experienced by the villagers?

The Hon'ble Sri T. MARIAPPA.—I do not admit there is any harassment. Here and there there may be some mistake. But, we have always immediately corrected wher ver it had been brought to our notice.

Paddy Procurement for 1951.

Q*—4. **Sri M. V. KRISHNAPPA (Kolar District—General).—

Will the Government be pleased to state:—

(*a*) the total quantity of paddy that was expected under procurement this year;

(*b*) the quantity of paddy that has been procured up to the end of 15th February 1951?

A—**The Hon'ble Sri T. MARIAPPA** (Home Minister).—

(*a*) A target of 18,00,000 pallas of paddy has been fixed for the year 1951.

(*b*) A total quantity of 11,62,253 pallas of paddy has been acquired up to the end of February, 1951.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಟಾರ್ಜೆಟ್ ಫಿಗರ್ ಯಾವಾಗ ನಿಗದಿ ಮಾಡಿದ್ದು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಡಿಸೆಂಬರು ತಿಂಗಳಿನ ಮೊದಲನೆಯ ವಾರದಲ್ಲಿ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಅದನ್ನು ನಿಗದಿ ಮಾಡಿದ ಮೇಲೆ ನಿರೀಕ್ಷಿಸಿದಷ್ಟು ಮಳೆ ಬಾರದೆ ಬಹಳ ಕಡಮೆ ಬಂದದ್ದರಿಂದ ಅಂದಾಜು ಮಾಡಿದಷ್ಟು ವಸೂಲಾಗುವುದಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೋಲಾರ ಮತ್ತು ಚಿತ್ರದುರ್ಗ ಜಿಲ್ಲೆಗಳ ಒಂದೆರಡು ತಾಲ್ಲೂಕುಗಳನ್ನು ಬಿಟ್ಟು ಬಾಕಿ ಕಡೆಗಳಲ್ಲಿ ನವೆಂಬರಿನ ಮೊದಲನೆಯ ವಾರದಲ್ಲಿ ಮಳೆ ಬಹಳ ಸಹಾಯ ಮಾಡಿದೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ನವೆಂಬರು ಮತ್ತು ಡಿಸೆಂಬರು ತಿಂಗಳುಗಳಲ್ಲಿ ಅನೇಕ ಕಡೆ ಮಳೆ ಬಂದಿಲ್ಲವೆಂಬುದು ಗಮನಕ್ಕೆ ಬಂದಿದೆಯೆ?